ಹೆಚ್ಚು ಹೊತ್ತು ಕುಳಿತುಕೊಳ್ಳಲು ಸಾಧ್ಯವಾಗದಿರುವುದರಿಂದ ಅವರು ಒಂದು ವಿಷಯವಾಗಿ ಸರ್ಕಾರದ ಗಮನ ಸೆಳೆಯಬೇಕಾಗಿರುವುದರಿಂದ ತಾವು ಅವರಿಗೆ ವಿಷಯ ಪ್ರಸ್ತಾಪಿಸಲು ವಿಶೇಷ ಅವಕಾಶ ಒದಗಿಸಿಕೊಡಬೇಕೆಂದು ಕೋರುತ್ತೇನೆ.

ಛೇರ್ಮನ್: ಆಯಿತು.

9 ಗಮನ ಸೆಳೆಯುವ ಸೂಚನೆಗಳು

ವಿಷಯ: (ಅ) ಹಾಸನ ಜಿಲ್ಲೆಯ ಬಿಟ್ಟಗೌಡನಹಳ್ಳಿ ಸರಹದ್ದಿನಲ್ಲಿ ನಗರದ ತ್ಯಾಜ್ಯ ವಸ್ತುಗಳ ವಿಲೇವಾರಿಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದ ಕುರಿತು.

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ): ಮಾನ್ಯ ಛೇರ್ಮನ್‌ರವರೆ, ಹಾಸನ ಜಿಲ್ಲೆಯ ಬಿಟ್ಟಗೌಡನಹಳ್ಳಿ ಸರಹದ್ದಿನಲ್ಲಿ ನಗರದ ತ್ಯಾಜ್ಯ ವಸ್ತುಗಳ ವಿಲೇವಾರಿಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ನಾನು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಗಮನ ಸೆಳೆಯುತ್ತಿದ್ದೇನೆ.

+ಶ್ರೀ ಕೆ.ಹೆಚ್. ರಂಗನಾಥ್(ಮಾನ್ಯ ಅರಣ್ಯ, ಪರಿಸರ ಮತ್ತು ಜೀವಪರಿಸ್ಥಿತಿ ಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

1991ರ ಜನಗಣತಿ ಪ್ರಕಾರ ಹಾಸನ ನಗರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆ 1.65 ಲಕ್ಷ ಇರುತ್ತದೆ. ಹಾಸನ ನಗರಕ್ಕೆ ಹೇಮಾವತಿ ಮತ್ತು ಯಗಚಿ ನದಿಯಿಂದ ದಿನಂಪ್ರತಿ ಸುಮಾರು 9140 ಘನ ಲೀಟರ್‌ನಷ್ಟು ನೀರು ಸರಬರಾಜು ಮಾಡಲಾಗುತ್ತಿದೆ.

ನಗರ ಘನ ತ್ಯಾಜ್ಯ ವಿಲೇವಾರಿ:

ಹಾಸನ ನಗರಸಭೆ ಪ್ರದೇಶದಿಂದ ಪ್ರತಿದಿನ ಸುಮಾರು 24ಟನ್‌ನಷ್ಟು ಘನ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ಇದನ್ನು ಸಂಗ್ರಹಿಸಿ ಲಾರಿ ಮತ್ತು ಟ್ರಾಕ್ಟರ್ ಮೂಲಕ ಹಾಸನ ಪಟ್ಟಣದಿಂದ ಮೂರು ಕಿ.ಮೀ. ದೂರದಲ್ಲಿರುವ ಬಿಟ್ಟಗೌಡನಹಳ್ಳಿ ಪ್ರದೇಶದಲ್ಲಿ ವಿಸರ್ಜಿಸಲಾಗುತ್ತಿದೆ.

ಮಂಡಳಿಯ ಹಾಸನ ಪ್ರಾದೇಶಿಕ ಅಧಿಕಾರಿಗಳು ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಪ್ರದೇಶವನ್ನು ಹಾಗೂ ನಗರದ ರೊಚ್ಚನ್ನು ವಿಸರ್ಜಿಸುವ ವ್ಯವಸ್ಥೆಯನ್ನು ಪರಿವೀಕ್ಷಿಸಿರುತ್ತಾರೆ. ಈ ಪರಿವೀಕ್ಷಣೆಯಿಂದ ಕೆಳಕಂಡ ಅಂಶಗಳು ಕಂಡು ಬಂದಿರುತ್ತದೆ.

1. ಬಿಟ್ಟಗೌಡನಹಳ್ಳಿ ಪ್ರದೇಶದಲ್ಲಿ ಒಟ್ಟು ಎಂಟು ಎಕರೆ ಭಾಗದಲ್ಲಿ ನಗರದ ಘನ ತ್ಯಾಜ್ಯ ವಸ್ತುಗಳನ್ನು ತಗ್ಗು ಪ್ರದೇಶಗಳನ್ನು ತುಂಬಿ ವಿಸರ್ಜಿಸಲಾಗುತ್ತಿದೆ. ಹಾಗೂ ಹೆಚ್ಚುವರಿ ಘನ ತ್ಯಾಜ್ಯವನ್ನು ಈ ಪ್ರದೇಶದಲ್ಲೇ ಗುಡ್ಡೆ ಮಾಡಿ ಸಂಗ್ರಹಿಸಲಾಗುತ್ತಿದೆ.

2. ಸ್ವಲ್ಪ ಪ್ರಮಾಣದ ಘನ ತ್ಯಾಜ್ಯ ವಸ್ತುಗಳನ್ನು ಈ ಪ್ರದೇಶದಲ್ಲಿ ಗಟ್ಟಿ ಮಾಡಲಾಗುತ್ತಿದೆ.

3. ಈ ಹಿಂದೆ ಬಿಟ್ಟಗೌಡನಹಳ್ಳಿ ಬಳಿಯಲ್ಲಿ ರಸ್ತೆಗಳ ಮೂಲೆಗಲ್ಲಲ್ಲಿ ವಿಸರ್ಜಿಸುತ್ತಿದ್ದ ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುತ್ತಿದ್ದನ್ನು ಈಗ ನಿಲ್ಲಿಸಿರುವುದು ಕಂಡು ಬಂದಿದೆ.

ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸುವ ಸ್ಥಳಕ್ಕೆ ಕಾಂಪೌಂಡ್ ಗೋಡೆ ಕಟ್ಟಲು ಹಾಸನ ನಗರಸಭೆಯು 10 ಲಕ್ಷ ರೂ.ಗಳ ಯೋಜನೆಯನ್ನು ತಯಾರಿಸಿದೆ ಹಾಗೂ ಈ ಪ್ರದೇಶದಲ್ಲಿ ಹಸಿರು ಪಟ್ಟಿಯನ್ನು ನಿರ್ಮಿಸಲು ಸಹಾ ತೀರ್ಮಾನ ಕೈಗೊಂಡಿದೆ ಎಂದು ತಿಳಿದು ಬಂದಿದೆ.

ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ವ್ಯವಸ್ಥೆಯನ್ನು ಸ್ಥಾಪಿಸಲು ಹಾಸನ ನಗರ ಸಭೆಯು ನಗರದ ಹೊರವಲಯದಲ್ಲಿನ ಮೂರು ಪ್ರದೇಶಗಳಲ್ಲಿ 4 ಎಕರೆ ಜಮೀನುಗಳನ್ನು ಪಡೆಯಲು ಯೋಜನೆ ಹೊಂದಿರುವುದಾಗಿ ತಿಳಿದುಬಂದಿದೆ.

ದಿನಾಂಕ 15-1-2000ರಂದು ಪರಿಸರ (ಸಂರಕ್ಷಣಾ) ಕಾಯ್ದೆ, 1986 ಅಡಿಯಲ್ಲಿ ನಗರ ಪ್ರದೇಶದ ಘನತ್ಯಾಜ್ಯ ವಸ್ತು (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ ಜಾರಿಗೊಳಿಸಿದ್ದು, ಇದರನ್ವಯ ಎಲ್ಲಾ ಸ್ಥಳೀಯ ಸಂಸ್ಥೆಗಳು (Local Bodies) ಘನ ತ್ಯಾಜ್ಯ ವಸ್ತುಗಳನ್ನು ಸುಸಜ್ಜಿತವಾಗಿ ವಿಲೇವಾರಿ ಮಾಡಲು ವಿಲೇವಾರಿ ಪ್ರದೇಶವನ್ನು ಗುರುತಿಸಬೇಕಾಗಿರುತ್ತದೆ. ಈ ಪ್ರದೇಶವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಗುರುತಿಸಬೇಕು ಹಾಗೂ ಈ ನಿಯಮದಲ್ಲಿ ನಿಗದಿಪಡಿಸಿರುವಂತೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ವಿಲೇವಾರಿಯನ್ನು ಅನುಸರಿಸಬೇಕಾಗಿರುತ್ತದೆ. ಈ ನಿಯಮದನುಸಾರ ಎಲ್ಲಾ ಸ್ಥಳೀಯ ಸಂಸ್ಥೆಗಳು ತ್ಯಾಜ್ಯ ವಸ್ತುಗಳ ನಿರ್ವಹಣೆ ವ್ಯವಸ್ಥೆಯನ್ನು ಅಳವಡಿಸಲು 31-12-2003ರವರೆಗೆ ಕಾಲಾವಕಾಶವಿದೆ. ಈ ವ್ಯವಸ್ಥೆಯನ್ನು ಸ್ಥಾಪಿಸುವ ಜವಾಬ್ದಾರಿಯು ಸ್ಥಳೀಯ ಸಂಸ್ಥೆಗಳ ಮೇಲೆ ಇದ್ದು, ಇದರ ಮಾಪನದ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದಾಗಿರುತ್ತದೆ.

ಮಂಡಳಿಯು ಹಾಸನ ನಗರ ಸಭೆಗೆ 8-1-2001ರಂದು ನೋಟೀಸನ್ನು ಜಾರಿ ಮಾಡಿ ಮೇಲೆ ಸೂಚಿಸಿದ ನಿಯಮಾವಳಿಗಳ ಅನುಸಾರ ಕ್ರಮ ಜರುಗಿಸುವಂತೆ ಸೂಚಿಸಿರುತ್ತದೆ.

ನಗರದ ರೊಚ್ಚು ವಿಲೇವಾರಿ:

ಹಾಸನ ನಗರಕ್ಕೆ ಪ್ರತಿದಿನ ಸರಬರಾಜು ಮಾಡುತ್ತಿರುವ 9140 ಘನ ಲೀಟರ್ ನೀರಿನಲ್ಲಿ ಸುಮಾರು ಶೇ.60 ರಿಂದ 70 ಭಾಗ ನಗರದ ರೊಚ್ಚಾಗಿ ವಿಸರ್ಜಿಸಲಾಗುತ್ತಿದೆ. ಹಾಸನ ನಗರ ಸಭೆಯು ಪಟ್ಟಣದ ಶೇಕಡ 40 ಭಾಗಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಪೂರೈಸಲಾಗಿದೆ. ನಗರದ ರೊಚ್ಚನ್ನು ಸಂಸ್ಕರಿಸಲು ಆಕ್ಸಿಡೇಷನ್ ಪಾಂಡ್ ಎಂಬ ಸಂಸ್ಕರಣ ಘಟಕವನ್ನು ಅಳವಡಿಸಲಾಗಿದ್ದು, ಇದು 400 ಘನ ಲೀಟರ್‌ನಷ್ಟು ಪ್ರತಿದಿನ ಸಂಸ್ಕರಿಸುವ ಸಾಮರ್ಥ್ಯ ಹೊಂದಿರುತ್ತದೆ. ಆದಾಗ್ಯೂ ಇದು ನಗರದ ಎಲ್ಲಾ ರೊಚ್ಚನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿರುವುದಿಲ್ಲ ಮತ್ತು ಈ ಸಂಸ್ಕರಣ ಘಟಕದ ನಿರ್ವಹಣೆಯು ಸರಿ ಇರುವುದಿಲ್ಲ. ಸುಮಾರು ಶೇ.60 ಭಾಗದಷ್ಟು ಕಲುಷಿತ ನೀರು ಶುದ್ಧೀಕರಿಸದೆ ವಿಸರ್ಜಿಸಲಾಗುತ್ತಿದೆ. ಇದರಲ್ಲಿ ಸ್ವಲ್ಪ ಭಾಗ ಚಿನ್ನಪಟ್ಟಣ ಕೆರೆಗೆ ಬಿಡಲಾಗಿದೆ, ಇನ್ನೊಂದು ಭಾಗವು ಹುಣಸಿನಕೆರೆ ಸೇರುತ್ತಿದೆ. ಈ ಕೆರೆಗಳಿಂದ ತುಂಬಿ ಹರಿದಂತಹ ರೊಚ್ಚು ನೀರು ಮಕ್ಕನಕಟ್ಟೆ ಸೇರಿ ಅಲ್ಲಿಂದ ಹರಿದು ಬಂದು ಯಗಚಿ ನದಿಯನ್ನು ಸೇರಿ ಕೊನೆಗೆ ಹೇಮಾವತಿ ನದಿಯನ್ನು ಸೇರುತ್ತದೆ. ಹೇಮಾವತಿ ನದಿ ನೀರು ಹಾಸನ ಪಟ್ಟಣಕ್ಕೆ ಸರಬರಾಜಾಗುತ್ತಿದೆ.

ಕರ್ನಾಟಕ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯು ಮೊದಲನೇ ಹಂತದಲ್ಲಿ ಹಾಸನ ಪಟ್ಟಣದ ಶೇ.40 ಭಾಗಕ್ಕೆ ಒಳಚರಂಡಿ ವ್ಯವಸ್ಥೆ ಪೂರೈಸಿರುತ್ತದೆ. ಉಳಿದ ಭಾಗದ ಒಳಚರಂಡಿ ಯೋಜನೆಯನ್ನು ಒರಡನೇ ಹಂತದಲ್ಲಿ ಪೂರೈಸಲಾಗುತ್ತಿದೆ. ಇದಲ್ಲದೆ ಹಾಸನ ಪಟ್ಟಣಕ್ಕೆ ಕಲುಷಿತ ನೀರನ್ನು ಸಂಸ್ಕರಿಸುವ ಹೊಸ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಯೋಜಿಸಲಾಗಿದೆ ಎಂದು ತಿಳಿದುಬಂದಿದೆ. ಎರಡನೇ ಹಂತದ ಕಾಮಗಾರಿಯ ಒಟ್ಟು ಅಂದಾಜು ರೂ.12.50 ಕೋಟಿ ರೂ.ಗಳಾಗಿರುತ್ತದೆ.

ಆರ್ಥಿಕ ತೊಂದರೆಗಳಿಂದ ನದಿ ದಂಡೆಗಳ ಮೇಲೆ ಇರುವ ನಗರ ಮತ್ತು ಪಟ್ಟಣಗಳು ತಮ್ಮ ರೊಚ್ಚನ್ನು ನೀರಿನ ಮೂಲಗಳಿಗೆ ವಿಸರ್ಜಿಸುವ ಮೊದಲು ಶುದ್ಧೀಕರಣ ವ್ಯವಸ್ಥೆಯನ್ನು ಅಳವಡಿಸುವುದರಲ್ಲಿ ವಿಳಂಬ ಮಾಡಿವೆ. ಈಗ ಹಲವಾರು ಆರ್ಥಿಕ ಸಹಾಯಗಳ ಯೋಜನೆಗಳ ಅಡಿಯಲ್ಲಿ ರೊಚ್ಚನ್ನು ಶುದ್ಧೀಕರಿಸುವ ಘಟಕಗಳನ್ನು ಸ್ಥಾಪಿಸುವ ವ್ಯವಸ್ಥೆ ಕೈಗೊಂಡಿದ್ದು ನಗರ ಪ್ರದೇಶದ ಕುಡಿಯುವ ನೀರಿನ ಮೂಲಗಳ ಮಲಿನತೆಯನ್ನು ಪರಿಹರಿಸಲಾಗುತ್ತಿದೆ. ನಗರ ಕೊಚ್ಚೆ ನೀರನ್ನು ಶುದ್ಧೀಕರಿಸಿ ನಿಯಮಾನುಸಾರ ವಿಸರ್ಜಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯೂ ಸ್ಥಳೀಯ ಸಂಸ್ಥೆಗಳಿಗೆ ತಿಳುವಳಿಕೆ ನೀಡುತ್ತಿದೆ.

+ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಹಾಸನದಿಂದ ಎರಡು ಕಿಲೋಮೀಟರ್ ದೂರದಲ್ಲಿ ಅ ಬಿಟ್ಟಗೌಡನಹಳ್ಳಿ ಗ್ರಾಮವಿದೆ. ಆ ಗ್ರಾಮದ ಪಕ್ಕದಲ್ಲಿ ಹಾಸನ ಗೊರೂರು ರಸ್ತೆ ಇದೆ. ಆ ರಸ್ತೆಯ ಪಕ್ಕದಲ್ಲಿ ಹದಿನೈದು ಎಕರೆ ಗೋಮಾಳದ ಭೂಮಿ ಇದೆ. ಹಾಸನದ ಮುನಿಸಿಪಾಲಿಟಿಯವರು ತ್ಯಾಜ್ಯವಸ್ತುಗಳನ್ನು ತೆಗೆದುಕೊಂಡು ಹೋಗಿ ಆ ಹದಿನೈದು ಎಕರೆಯಲ್ಲಿ ಬೇಕಾಬಿಟ್ಟಿ ಹಾಕಿದ್ದಾರೆ. ಒಂದು ಜಾಗದಲ್ಲೇನು ಸುರಿದಿದ್ದೇವೆಂದು ಅವರು ಹೇಳಿದ್ದಾರೆ ಅಷ್ಟು ಸುಳ್ಳು. ದಾರಿಯಲ್ಲಿ ಹೋಗಲು ಆಗುವುದಿಲ್ಲ, ಅಷ್ಟು ದುರ್ವಾಸನೆ ಅಲ್ಲಿದೆ, ಹಳ್ಳಿಗೂ ಆ ದುರ್ವಾಸನೆ ಬರುತ್ತದೆ. ಆ ಹಳ್ಳಿಯವರು ಅದನ್ನು ಹೇಗೆ ಸಹಿಸಿಕೊಂಡು ವಾಸ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಆ ಹಳ್ಳಿಯ ಹೆಂಗಸರು ಮಾನ್ಯ ಶ್ರೀಕಂಠಯ್ಯನವರ ಹತ್ತಿರ ಬಂದು ನಾವು ಅಲ್ಲಿ ವಾಸ ಮಾಡಲು ಆಗುವುದಿಲ್ಲ, ನಮ್ಮ ಊರಿಗೆ ಸೇರಿರುವ ಜಮೀನಿಗೆ ಹಾಸನದ ಮುನಿಸಿಪಾಲಿಟಿಯವರು ಈ ರೀತಿ ತ್ಯಾಜ್ಯ ವಸ್ತುಗಳನ್ನು ಹಾಕುತ್ತಿದ್ದಾರೆ, ನಮಗೆ ಬಹಳ ತೊಂದರೆಯಾಗುತ್ತಿದೆ, ಊರಿನಲ್ಲಿ ಅನೇಕರಿಗೆ ಇದರಿಂದ ರೋಗರುಜಿನ ಪ್ರಾರಂಭವಾಗಿದೆಯೆಂದು ತಮ್ಮ ಅಳಲನ್ನು ತೋಡಿಕೊಂಡರು. ಶ್ರೀಕಂಠಯ್ಯನವರು ನನಗೆ ಅದರ ಬಗ್ಗೆ ಹೋಗಿ ಸ್ವಲ್ಪ ಪರಿಶೀಲನೆ ಮಾಡಿ ಎಂದರು, ನಾನು ಹಾಸನದ ಮುನಿಸಿಪಾಲಿಟಿಗೆ ಹೋಗಿ ಏಕೆ ತ್ಯಾಜ್ಯವಸ್ತುವನ್ನು ಅಲ್ಲಿಗೆ ತೆಗೆದುಕೊಂಡು ಹಾಕುತ್ತೀರೆಂದು ಕೇಳಿದಾಗ ಜಾಗವೇ ಇಲ್ಲ ಆದ್ದರಿಂದ ಅಲ್ಲೇ ಹಾಕುತ್ತೇವೆಂದು ಹೇಳಿದರು. ಆ ಊರಿನ ತ್ಯಾಜ್ಯವಸ್ತುವಾಗಿದ್ದರೆ ಅಲ್ಲಿ ಹಾಕಲು ತೊಂದರೆಯಾಗುತ್ತಿರಲಿಲ್ಲ, ಆದರೆ ಹಾಸನದಿಂದ ತ್ಯಾಜ್ಯವಸ್ತುವನ್ನು ತೆಗೆದುಕೊಂಡು ಅಲ್ಲಿ ಹಾಕುತ್ತಿರುವುದರಿಂದ ಪರಿಸರ ಮಾಲಿನ್ಯ ಮಂಡಳಿಯವರಿಗೆ ಗೊತ್ತಾದರೆ ತಮ್ಮ ಮೇಲೆ ಕೇಸನ್ನು ಹಾಕುತ್ತಾರೆ, ತೊಂದರೆಯಾಗುತ್ತದೆಂದು ಹೇಳಿದೆ. ಮತ್ತೊಂದು ಜಾಗವನ್ನು ಹುಡುಕುತ್ತಿದ್ದೇವೆಂದು ಹೇಳಿದ್ದರು. ಜಿಲ್ಲಾಧಿಕಾರಿಯವರಿಗೂ ಹೋಗಿ ಹೇಳಿದೆ, ಎಲ್ಲಾದರೂ ಜನಸಂದಣಿ ಕಡಿಮೆ ಇರುವ ಕಡೆ ಜಾಗವನ್ನು ಗೊತ್ತುಮಾಡಿ ತೆಗೆದುಕೊಳ್ಳಬೇಕೆಂದು ಹೇಳಿದರು.

ಹಾಸನದಿಂದ ಎಂಟು ಹತ್ತು ಮೈಲಿಯ ಒಳಗೆ ಜನಸಂಖ್ಯೆ ಕಡಿಮೆ ಇರುವಂಥ ಖಾಲಿ ಜಾಗವು ಸಿಗುವುದಿಲ್ಲ, ಇದರಿಂದ ಬಹಳ ತೊಂದರೆಯಾಗುತ್ತಿದೆ. ಹಾಸನದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಅರಣ್ಯ ಪ್ರದೇಶವಿದೆ, ಅದರ ಒಂದು ಮೂಲೆಯನ್ನು ಬಾಡಿಗೆ ಆಧಾರದ ಮೇಲೆ ಕೊಟ್ಟರೆ ಅಲ್ಲಿ ಕಸವನ್ನು ಸುರಿಯುತ್ತೇವೆಂದು ಕೇಳಿದ್ದೆವು, ಆದರೆ ತಾವು ಅದಕ್ಕೆ ಆಗುವುದಿಲ್ಲವೆಂದು ಹೇಳಿದಿರಿ. ಆರ್ಥಿಕ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ. ಹಾಗಾದರೆ ಹಳ್ಳಿಯವರ ಸಂಕಟವನ್ನು ಯಾರ ಕೈಯಲ್ಲಿ ಹೇಳಬೇಕು? ಆ ಜನರು ನನಗೆ ಮತದಾನವನ್ನು ಕೊಟ್ಟಿದ್ದಾರೆ. ಆ ಊರಿನ ಮಹಿಳೆಯರು ನಮ್ಮ ಊರಿನಲ್ಲಿ ತಾವು ಒಂದು ಗಂಟೆ ಇದ್ದುಬಿಡಿ, ಇಲ್ಲದಿದ್ದರೆ ಶ್ರೀಕಂಠಯ್ಯನವರನ್ನು ಅರ್ಧಗಂಟೆ ಇದ್ದುಬಿಡಲು ಹೇಳಿ, ತಾವು ಇದ್ದುಬಿಟ್ಟರೆ ನಾವು ಇರಲು ಅಭ್ಯಂತರವೇನಿಲ್ಲವೆಂದು ಹೇಳಿದರು. ಆ ಮಹಿಳೆಯರ ವೇದನೆಯನ್ನು ನೋಡಿದಾಗ ಬಹಳ ನೋವಾಯಿತು. ಶ್ರೀಕಂಠಯ್ಯನವರು ಇದರ ಬಗ್ಗೆ ಕ್ರಮ ತೆಗೆದು ಕೊಳ್ಳೋಣವೆಂದು ಹೇಳಿದವರು ಆ ಕಡೆ ತಲೆಯನ್ನೇ ಹಾಕಿಲ್ಲ. ನಾನೂ ಆ ಕಡೆ ಹೋಗುವುದನ್ನು ಬಿಟ್ಟುಬಿಟ್ಟೆ. ಬಹುಶಃ ಎಂಟು ಹತ್ತು ದಿವಸಗಳಲ್ಲಿ ಆ ಊರಿನ ಮಹಿಳೆಯರು ನಮ್ಮನ್ನು ಹಿಡಿದುಕೊಳ್ಳುತ್ತಾರೆ. ತಾವು ಏನಾದರೂ ಮಾಡಿಕೊಳ್ಳಿ, ದಯಮಾಡಿ ಇನ್ನು ಒಂದೆರಡು ತಿಂಗಳಿನೊಳಗೆ ಆ ಜಾಗದಲ್ಲಿ ತ್ಯಾಜ್ಯವಸ್ತುಗಳನ್ನು ಹಾಕುವುದನ್ನು ನಿಲ್ಲಿಸಬೇಕು. ಅನಂತರ ತಾವೇನು ಒಳಚರಂಡಿಯ ನೀರು ಹೋಗುವ ಬಗ್ಗೆ ಹೇಳಿದ್ದೀರಿ, ನೂರು ಪರ್‌ಸೆಂಟ್ ಆ ನೀರು ನದಿಗೇ ಸೇರುತ್ತಿದೆ. ಅದು ಚಿನ್ನಪಟ್ಟಣದ ಕೆರೆಯ ಹತ್ತಿರ ಬರುತ್ತದೆ, ಯಾರದೋ ಪ್ರೇರಣೆಗೆ ಒಳಗಾಗಿ ರಾತ್ರಿ ಹನ್ನೆರಡು ಗಂಟೆ ಅಮಾವಾಸೆಯ ದಿವಸ ಆ ಕೆರೆಯನ್ನು ಒಡೆದರು. ಆ ನೀರು ತಣ್ಣೀರಳ್ಳ ಎಂಬ ಜಾಗವಿದೆ, ಅಲ್ಲಿಗೆ ಬರುತ್ತದೆ, ಹಾಸನದ ಕಡೆಯ ನೀರೂ ಅಲ್ಲಿಗೇ ಬರುತ್ತದೆ. ಮಾತೃಘಟ್ಟವೆಂಬ ಕೆರೆ ಅದಕ್ಕೆ ಇದೆ, ಅಲ್ಲಿಂದ ಅದು ಯಗಚಿಗೆ ಹೋಗುತ್ತದೆ. ಯಗಚಿಯಿಂದ ಹಾಸನ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿದ್ದಾರೆ. ಹೀಗಿರುವಾಗ ಆ ಒಳಚರಂಡಿ ನೀರು ಮತ್ತೆ ನಗರಕ್ಕೇ ಬಂದಂತಾಯಿತು, ಏನಾದರೂ ಉಳಿದುಕೊಂಡಿದ್ದರೆ ಹೇಮಾವತಿಗೆ ಹೋಗುತ್ತದೆ, ಅಲ್ಲಿಂದ ಮತ್ತೆ ಪಂಪ್ ಆಗಿ ಹಾಸನ ನಗರಕ್ಕೇ ಬರುತ್ತದೆ. ಹಾಸನ ನಗರದಲ್ಲಿ ಜನರು ಅನಾರೋಗ್ಯಕ್ಕೆ ಹೆಚ್ಚಾಗಿ ತುತ್ತಾಗುತ್ತಿರುವುದಕ್ಕೆ ಇದೇ ಕಾರಣ. ಹಾಸನದಲ್ಲಿ ನಾಲ್ಕು ಅಭಿವೃದ್ಧಿ ಕೆಲಸವನ್ನು ನಿಲ್ಲಿಸಿದರೂ ಚಿಂತೆ ಇಲ್ಲ ಆದರೆ ತ್ಯಾಜ್ಯವಸ್ತುಗಳನ್ನು ದೂರಕ್ಕೆ ಹಾಕಿ ನಿರ್ಭಾಗ್ಯ ಜನರು ನೆಮ್ಮದಿಯಿಂದ ಉಸಿರಾಡಲು ಅವಕಾಶ ಮಾಡಿಕೊಡಿ. ಇದೇ ಕೊಳಕು ನೀರು ನದಿಗೆ ಹೋಗಿ ಅಲ್ಲಿಂದ ಪಂಪ್ ಆಗಿ ಮತ್ತೆ ನಗರಕ್ಕೇ ಬರುತ್ತಿದೆ. ಈ ಎರಡು ತೊಂದರೆಗಳಿಂದ ಜನರನ್ನು ತಕ್ಷಣವೇ ಬಿಡುಗಡೆ ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಪುಣ್ಯ ಬರುತ್ತದೋ, ಅಥವಾ ಇಲ್ಲವೋ ಬೇರೆ ವಿಚಾರ. ಆದರೆ ಇದು ಮಾಡಬೇಕಾದ ಕರ್ತವ್ಯ. ನಗರಗಳು ಬೆಳೆಯುತ್ತಿರುವ ಇವತ್ತಿನ ದಿವಸಗಳಲ್ಲಿ ಇದು ಅತ್ಯಂತ ಅವಶ್ಯಕವಾಗಿ ಆಗಬೇಕಾಗಿದೆ. ನಾವು ಇದರ ಬಗ್ಗೆ ಈಗಾಗಲೆ ನೋಟೀಸ್ ಕೊಟ್ಟಿದ್ದೇವೆ. ಸ್ವಲ್ಪ ದಿವಸ ನೋಡಿ ಅವರು ನಮ್ಮ ನೋಟೀಸ್‌ಗೆ ಮಾನ್ಯ ಮಾಡದಿದ್ದರೆ, ಸುಮಾರು ಎಂಟು ಎಕರೆ ಪ್ರದೇಶದಲ್ಲಿ ಅವರು ಏನೂ ಮಾಡಿಲ್ಲ, ಅಲ್ಲೇನು ಗುಂಡಿಗಳು ಇತ್ತು ಅಲ್ಲಿ ಕಸವನ್ನು ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಇದಕ್ಕಾಗಿ 12 ಎಕರೆ ಜಾಗವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಗುಂಡಿ ಸರಿಯಾಗಿ ತೆಗೆದು ಮಣ್ಣನ್ನು ಮುಚ್ಚಿದರೆ

ಸರಿಹೋಗುತ್ತದೆ. ಸುತ್ತಲು ದೊಡ್ಡ ಮರಗಳನ್ನು ಬೆಳೆಸಿದರೆ ವಾಸನೆ ಕಡಿಮೆಯಾಗುತ್ತದೆ. ಇವರು ಹತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಅಲ್ಲಿ ಕಾಂಪೌಂಡ್‌ನ್ನು ಹಾಕಲು ಹೊರಟಿರುವುದೇ ತಪ್ಪು. ನಾನು ಅಲ್ಲಿಗೆ ಬಂದಿದ್ದಾಗ ಒಂದು ಸ್ಥಳವನ್ನು ನೋಡಿದ್ದೆ, ಭಾರತ್ ಥಿಯೇಟರ್‌ನ ಪಕ್ಕದಲ್ಲಿ ಒಂದು ದೊಡ್ಡ ಗುಂಡಿ ಇತ್ತು. ಅಲ್ಲಿಗೆ ಬೆಂಗಳೂರಿನ ತ್ಯಾಜ್ಯ ವಸ್ತುಗಳನ್ನೆಲ್ಲ ಹಾಕಿ ಅನಂತರ ಮಣ್ಣಿನಿಂದ ಮುಚ್ಚಿ ಚಿನ್ನಾಗಿ ಮಾಡಿದ್ದಾರೆ. ನಾವು ಅವರಿಗೆ ಈಗಾಗಲೆ ಒಂದು ನೋಟೀಸ್ ಕೊಟ್ಟಿದ್ದೇವೆ, ಅನಂತರ ಸಮಯವನ್ನು ನಿಗದಿ ಮಾಡಿ ಮತ್ತೊಂದು ನೋಟೀಸ್ ಕೊಡುತ್ತೇವೆ, ಅನಂತರವೂ ಮಾಡದಿದ್ದರೆ ಪ್ರಾಸಿಕ್ಯುಷನ್ ಮಾಡಿಯೇ ಮಾಡುತ್ತೇವೆ. ಹಾಸನ ನಗರಪಾಲಿಕೆಯಲ್ಲಿ ಅಡ್ಮಿನಿಸ್ಟ್ರೇಟರ್‌ರವರಿದ್ದಾರೆ, ಚುನಾಯಿತ ಸದಸ್ಯರುಗಳಿದ್ದರೆ ಅವರೆಲ್ಲರನ್ನು ಸೇರಿಸಿ ಪ್ರಾಸಿಕ್ಯುಷನ್ ಮಾಡತಕ್ಕಂಥ ಮುನಿಸಿಪಾಲಿಟಿ ಅಡ್ಮಿನಿಸ್ಟ್ರೇಷನ್ ಕಾನೂನಿಗೆ ತಿದ್ದುಪಡಿ ತರುವ ಅಗತ್ಯವಿದೆ. ನಾವು ಮತ್ತು ನೀವು ಅದನ್ನು ಇವತ್ತು ನೋಡುತ್ತಿದ್ದೇವೆ. ರಸ್ತೆಯಲ್ಲಿ ಹೋಗುತ್ತಿದ್ದರೆ ಪಕ್ಕದಲ್ಲಿ ತಿಪ್ಪೆ ಇರುವುದು ಕಾಣಬಹುದಾಗಿದೆ. ನಮ್ಮೂರಿಗೆ ನಾವು ಟಾರ್ ರಸ್ತೆ ಮಾಡಿಸುತ್ತೇನೆ ಎಂದು ಭರವಸೆ ಕೊಟ್ಟು ಟಾರ್ ರಸ್ತೆ ಮಾಡಿಸಿರುತ್ತೇವೆ. ಆದರೆ ಅದರ ಪಕ್ಕದಲ್ಲೇ ತಿಪ್ಪೆ ಉದ್ಭವವಾಗಿ ಎಲ್ಲಾ ತಂದು ಅಲ್ಲೇ ಹಾಕುತ್ತಾರೆ. ಯಾರಾದರೂ ಏಕೆ ಅಲ್ಲಿ ಹಾಕುತ್ತೀರಾ? ಎಂದು ಅಲ್ಲಿ ಹಾಕುವವರನ್ನು ಕೇಳಿದರೆ, ಆ ಜಾಗ ನಿನ್ನದೋ ಎಂದು ದಬಾಯಿಸುತ್ತಾರೆ. ಇದೆಲ್ಲಾ ಇವತ್ತು ನಡೆಯುತ್ತಿದೆ. ನೀರಿನ ತ್ಯಾಜ್ಯ ವಸ್ತುಗಳ ವಿಚಾರ ಕೂಡ ನಾನು ಇವತ್ತು ಬೆಳಿಗ್ಗೆ ವಿವರವಾಗಿ ಓದಿದೆ. ಇಷ್ಟು ಬೇಜವಾಬ್ದಾರಿ ನಗರದಲ್ಲಿ ಇರಕೂಡದು. ನಗರಸಭೆಯವರು ಇದರ ಬಗ್ಗೆ ಆದ್ಯತೆ ಕೊಡಲೇಬೇಕು. ಕುಡಿಯುವ ನೀರಿಗೆ ಆದ್ಯತೆ ಕೊಡದೇ ಹೋದರೆ ಹೇಗೆ? ಇವತ್ತು ಈ ಸಿವಿರೇಜ್ ವಾಟರ್ ಯಗಚಿಗೆ ಬಂದು ಸೇರುತ್ತದೆ, ಯಗಚಿ ಹೇಮಾವತಿಗೆ ಸೇರುತ್ತದೆ, ಹೇಮಾವತಿ ನೀರು ನಾವು ಪಟ್ಟಣಕ್ಕೆ ಕೊಟ್ಟು, ನಮ್ಮ ಊರಿಗೆ ಕುಡಿಯುವ ನೀರನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಂಡರೆ ಅದರಿಂದ ಏನು ಪ್ರಯೋಜನ ಬಂತು? ಆದ್ದರಿಂದ ಇದಕ್ಕೆ ಏನಾಗಬೇಕು ಎಂಬುದನ್ನು ನೋಡಿ, ಮತ್ತೊಮ್ಮೆ ನೋಟೀಸ್ ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಒಂದು ಸಮಯವನ್ನು ನಾವು ನಿಗದಿ ಮಾಡುತ್ತೇವೆ. ಆ ಸಮಯದಲ್ಲಿ ಮಾಡುವುದಕ್ಕೆ ಅವರು ಪ್ರಯತ್ನ ಮಾಡದೇ ಹೋದರೆ ಪ್ರಾಸಿಕ್ಯೂಷನ್ ಮಾಡುವುದಂತೂ ನಿಜ. ತಾವು ದಯಮಾಡಿ ಅದಕ್ಕೆ ಅಡ್ಡಬರಬೇಡಿ.

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಸದನದಲ್ಲಿ ಹಾಜರಾಗಿದ್ದಾರೆ. ನೀರಿನ ಬಗ್ಗೆ ತಮ್ಮ ಇಲಾಖೆ ವತಿಯಿಂದ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ತಾವು ದಯಮಾಡಿ ತಿಳಿಸಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಕೂಡ ತಾವು ಪ್ರಸ್ತಾಪ ಮಾಡಿರುವುದರಿಂದ ನಾನಿಲ್ಲಿ ಮಧ್ಯ ಪ್ರವೇಶಿಸಲೇಬೇಕಾಗಿದೆ. ಮಾನ್ಯ ಮಂತ್ರಿಗಳು ಹೇಳಿರತಕ್ಕದ್ದು ನಿಜ. ಆ ಸ್ಥಳಕ್ಕೂ ಕೂಡ ನಾನು ಭೇಟಿ ನೀಡಿದ್ದೇನೆ. ತ್ಯಾಜ್ಯ ವಸ್ತುಗಳನ್ನು ಹಾಕಲಿಕ್ಕೆ 8 ಎಕರೆ ಜಮೀನು ಇದ್ದರೂ ಕೂಡ ಕೆಲವು ಸಲ ನಗರಸಭೆಯವರು ಟ್ರಾಕ್ಟರ್‌ಗಳ ಮೂಲಕ ಸಾಗಿಸಲಾದ ತ್ಯಾಜ್ಯ ವಸ್ತುಗಳನ್ನು ದೂರ ಹೋಗಿ ಹಾಕುವುದಕ್ಕೆ ಬದಲಾಗಿ ತಮಗೆ ಸಮೀಪವಾಗುವ ರಸ್ತೆ ಪಕ್ಕ ಅವುಗಳನ್ನು ಸುರಿದು

ಹೋಗಿಬಿಡುತ್ತಾರೆ. ಇದರಿಂದಾಗಿ ಬಹಳ ತೊಂದರೆಯಾಗಿದೆ. ಅದು ನಮಗೂ ಗೊತ್ತಿದೆ. ಅದೂ ಕೂಡ ನಮ್ಮ ಇಲಾಖೆಯ ವ್ಯಾಪ್ತಿಯಲ್ಲೂ ಬರುವುದರಿಂದ ಪರಿಸರ ಇಲಾಖೆಯ ಸೂಚನೆಯನ್ನು ಪಾಲಿಸುವಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತೆ ನಾನೂ ಕೂಡ ನಮ್ಮ ಇಲಾಖೆಯ ಅಧಿಕಾರಿಗಳಿಗೆ ತಿಳಿಸುತ್ತೇನೆ.

ವಿಷಯ: (ಅ) ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ವಿಶ್ರಾಂತಿ ವೇತನ ನೀಡುವ ಬಗ್ಗೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಅಧ್ಯಕ್ಷರೇ, ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ವಿಶ್ರಾಂತಿ ವೇತನ ನೀಡುವ ಬಗ್ಗೆ ನಾನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಈ ವಿಚಾರವಾಗಿ ನಿನ್ನೆ ತಾನೆ ಮುಷ್ಕರವೂ ಸಹ ನಡೆದಿದೆ. ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆಲ್ಲಾ ವಿಶ್ರಾಂತಿ ವೇತನವನ್ನು ನೀಡುತ್ತಿದ್ದಾರೆ. ಕರ್ನಾಟಕದಲ್ಲೂ ಕೂಡ ಮೊದಲು ಕೊಡುತ್ತಿದ್ದರು. ಈಗ ಏಕೋ ಅದನ್ನು ನಿಲ್ಲಿಸಿದ್ದಾರೆ. 1955ರಲ್ಲಿ ನಡೆದಂತಹ ಸತ್ಯಾಗ್ರಹದಲ್ಲಿ ಭಾಗಿಯಾದಂತಹ ಅನೇಕರು ಈಗಲೂ ಇದ್ದಾರೆ. ಅವರೆಲ್ಲರೂ ಸಹಿತ ನಿನ್ನೆ ದಿವಸ ಗಾಂಧೀಜಿ ಪ್ರತಿಮೆ ಮುಂದೆ ತಮ್ಮ ಬೇಡಿಕೆಗೆ ಒತ್ತಾಯಿಸಿ ಧರಣಿ ನಡೆಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲೂ ಸಹಿತ ಅವರು ನೋಡಿ ತಮ್ಮ ಮನವಿ ಅರ್ಪಿಸಿದ್ದಾರೆ. ಇದರ ಬಗ್ಗೆ ಹೈಕೋರ್ಟ್‌ನಲ್ಲೂ ಸಹಿತ ತೀರ್ಮಾನವಾಗಿ ಅಂತಿಮವಾಗಿ ಈ ವಿಷಯ ಸರ್ಕಾರದ ಮಟ್ಟದಲ್ಲೇ ಪೆಂಡಿಂಗ್ ಇದೆ. ಯಾರ್ಯಾರು ನಿಜವಾಗಿಯೂ ಕೂಡ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೋ ಅವರಿಗೆಲ್ಲಾ ವಿಶ್ರಾಂತಿ ವೇತನ ಕೊಡಬೇಕಾದುದು ಅವಶ್ಯಕವಾಗಿದೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಬೇಗನೇ ಕ್ರಮ ಕೈಗೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪೆನ್‌ಷನ್ ಅನ್ನು ಬಿಡುಗಡೆ ಮಾಡಿದ್ದರು. ಹಲವಾರು ವರ್ಷಗಳಿಂದ ನೀಡಲಾಗುತ್ತಿದ್ದ ಈ ಪೆನ್‌ಷನ್ ಅನ್ನು ಏಕಾಏಕಿಯಾಗಿ ಕಳೆದ ಕೆಲವು ವರ್ಷಗಳಿಂದ ನಿಲ್ಲಿಸಲಾಗಿದೆ. ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ತಮ್ಮ ಜೀವನದ ಕೊನೆಯ ಹಂತದಲ್ಲಿದ್ದಾರೆ. ಸುಮಾರು 70-75 ವರ್ಷಗಳ ವಯಸ್ಸಿನವರು ನಮ್ಮ ಮನೆಗೆ ಬಂದು ನಮಗೆ ಸಿಗಬೇಕಾದಂತಹ ಪೆನ್‌ಷನ್ ನಮಗೆ ಸಿಗುತ್ತಿಲ್ಲ, ತಾವು ದಯವಿಟ್ಟು ಇದರ ಬಗ್ಗೆ ಪ್ರಯತ್ನ ಮಾಡಬೇಕೆಂದು ನಮ್ಮಲ್ಲಿ ಕೋರುತ್ತಾರೆ. ಇಂತಹ ಒಂದು ದುಸ್ಥಿತಿಗೆ ನಾವು ಅವರನ್ನು ತರಬಾರದು. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಕ್ಷಣ ಅವರಿಗೆ ವಿಶ್ರಾಂತಿ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂಬ ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

+ಶ್ರೀ ಎ. ಕೃಷ್ಣಪ್ಪ(ಸಕ್ಕರೆ ಮತ್ತು ಪಶುಸಂಗೋಪನಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, ದಿನಾಂಕ 1.1.91ರಿಂದ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವ ಧನ ಮಂಜೂರು ಮಾಡುವ ಗೋವಾ ಗೌರವ